೨. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ:

ವಿಷಯ ರಾಜ್ಯಾದ್ಯಂತ ಕುಡಿಯುವ ನೀರಿನ ಸಮಸ್ಯೆ:

+ ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೆ, ನಾವು ಇವತ್ತು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ರಾಜ್ಯಾದ್ಯಂತ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿರುವುದನ್ನು ಪಟ್ಟಣ ಪ್ರದೇಶ ಹಾಗೂ ಹಳ್ಳಿ ಪ್ರದೇಶದಲ್ಲಿ ನಾವು ಕಾಣುತ್ತಿದ್ದೇವೆ. ಉತ್ತರ ಕರ್ನಾಟಕದಲ್ಲಿ ನೀರಿಗೆ ಹಾಹಾಕಾರ ಎದ್ದಿದೆ. ಈಗ ಸರ್ಕಾರದವರು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಜನ ಪ್ರತಿನಿಧಿಗಳು ಹಣ ತಲುಪಿಲ್ಲವೆಂದು ಹೇಳುತ್ತಿದ್ದಾರೆ. ನಾನು ಅನೇಕ ಜಿಲ್ಲಾ ಪರಿಷತ್ತಿನ ಅಧ್ಯಕ್ಷರನ್ನು ಸಹ ಭೇಟಿ ಮಾಡಿದ್ದೆ. ಅವರು ಹಣ ತಲುಪಿಲ್ಲವೆಂದು ಹೇಳುತ್ತಿದ್ದಾರೆ. ಅದರಿಂದಾಗಿ ನೀರಿಗೆ ಬಹಳ ತೊಂದರೆ ಇರುವುದರಿಂದ ಇದರ ಬಗ್ಗೆ ಚರ್ಚೆಯಾಗಬೇಕು. ಸರ್ಕಾರ ಇದರ ಬಗ್ಗೆ ಸ್ಪಷ್ಟವಾಗಿ ಯಾವ್ಯಾವ ಜಿಲ್ಲೆಗೆ ಯಾವ್ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಿದೆ, ಕೆಲಸಗಳು ಎಷ್ಟಾಗಿದೆ ಎನ್ನುವ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕೆನ್ನುವ ದೃಷ್ಟಿಯಿಂದಾಗಿ ನಾವೆಲ್ಲರೂ ಅಂದರೆ ಮಾನ್ಯ ಸಿ.ಬೈರೇಗೌಡರು, ಎಸ್.ಎಸ್.ಪಾಟೀಲ್ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಸಹ ಇದರ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿದ್ದಾರೆ. ಇದು ತಕ್ಷಣ ಆಗಬೇಕೆಂದು ನಮ್ಮ ಮನವಿ. ಇನ್ನು ಎರಡನೆಯದಾಗಿ, ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್‌ನಲ್ಲಿ ಮೀಸಲಾತಿಯ ಬಗ್ಗೆ ಗೊಂದಲದ ಆಗರವಾಗಿದೆ. ಇದರ ಬಗ್ಗೆ ಸಹ ಚರ್ಚೆಯಾಗಬೇಕು. ಸರ್ಕಾರವರು ಇದನ್ನು ಚರ್ಚೆ ಮಾಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲವೆಂದು ಹೇಳುತ್ತಾರೆ. ಇದರಲ್ಲಿ ಚರ್ಚೆ ಮಾಡುವುದೇನಿದೆ, ನಾವು ಮಾಡಿಕೊಂಡಿದ್ದೇವೆಂದು ಹೇಳುತ್ತಾರೆ. ಆದರೆ ತಮಗೆ ಗೊತ್ತಿದೆ, ತಮ್ಮ ಮನಸ್ಸಿಗೆ ಕನ್‌ವಿನ್ಸ್ ಆಗಿದೆ. ಈಗಾಗಲೇ ಜಿಲ್ಲಾ ಪಂಚಾಯತ್‌ಗಳಲ್ಲಿ ರಿಸರ್ವೇಶನ್ ಆಗಿರತಕ್ಕಂಥಾದ್ದು ಸರ್ಕಾರದ ಆಜ್ಞೆಯಾಗಿ ಗೆಜೆಟ್‌ನಲ್ಲಿ ಕೂಡ ಬಂದಿದೆ. ಇದರಲ್ಲಿ ಅನೇಕ ಅನ್ಯಾಯಗಳಾಗಿದೆ. ಆಡಳಿತ ಪಕ್ಷದ ಶಾಸಕರು ಬಹುಶಃ ತಮಗೆ ಆಗಲೇ ಪತ್ರ ಬರೆದಿರಬಹುದು. ಅವರಿಗೆ ಅಧಿಕಾರಿಗಳು ಯಾವ್ಯಾವ ರೀತಿ ನಡೆದುಕೊಂಡಿದ್ದಾರೆ ಎನ್ನುವುದನ್ನು ತಿಳಿಸಿರಬಹುದು. ಇಂತಹ ಸನ್ನಿವೇಶದಲ್ಲಿ ಸರ್ಕಾರದ ಆಜ್ಞೆಯಾದ ಮೇಲೆ ಪಟ್ಟಣ ಸುಟ್ಟು ಹೋದಮೇಲೆ ನಾವೇನು ಮಾಡುವುದಕ್ಕಾಗುತ್ತದೆ, ಕೆರೆ ಒಡೆಯುವುದಕ್ಕೆ ಮೊದಲು, ನೀರು ನಿಲ್ಲಿಸುವುದಕ್ಕೆ ತಾವು ನಮ್ಮ ರಕ್ಷಣೆಗೆ ಬರಬೇಕು. ಈಗ ಸದನ ನಡೆಯದೆ ಇರತಕ್ಕಂಥ ಸಂದರ್ಭದಲ್ಲಿ ನಾವು ಕೋರ್ಟಿಗೆ ಹೋಗುವುದು ಏನಾದರೂ ಮಾಡಬಹುದು. ಆದರೆ ಸದನ ನಡೆಯುವಾಗ ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ದಯಮಾಡಿ ಇವೆರಡು ಬಹಳ ಮಹತ್ವದ ವಿಚಾರಗಳು. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ

ವಂದನಾ ನಿರ್ಣಯದ ಬಗ್ಗೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಇದೆಲ್ಲಾ ವಿಚಾರಗಳನ್ನು ಎತ್ತಿ ಎಂದು ತಾವು ಹೇಳಬಹುದು. ಆದರೆ ಖಚಿತವಾದ ಉತ್ತರ ಅದಕ್ಕೆ ಬರುವುದಿಲ್ಲ. ದಯಮಾಡಿ ಈ ಎರಡು ವಿಷಯಗಳಲ್ಲಿ ನಾಳೆ ಅಥವಾ ಇವತ್ತು ಸಾಯಂಕಾಲದ ಒಳಗಡೆ ಅವಕಾಶ ಮಾಡಿಕೊಟ್ಟು ನಮ್ಮ ನಿಲುವಳಿ ಸೂಚನೆ ಎತ್ತಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಿಯಮ 69 ರ ಪ್ರಕಾರ ನಾವು ಈಗಾಗಲೇ ಕುಡಿಯುವ ನೀರಿನ ವಿಚಾರವಾಗಿ ತಮ್ಮ ಗಮನ ಸೆಳೆದಿದ್ದೇವೆ. ತಾವೂ ಸಹ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಈಗಾಗಲೇ ಹೇಳಿದ್ದೀರಿ. ಇದಕ್ಕೆ 2-3 ದಿವಸಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕಾಗಿದೆ. ಇಡೀ ರಾಜ್ಯದ ತುಂಬಾ ದಿನನಿತ್ಯ ಪತ್ರಿಕೆಯಲ್ಲಿ ನೋಡುತ್ತಿದ್ದೇವೆ. ಒಂದಲ್ಲ ಒಂದು ಕಡೆ ಕುಡಿಯುವ ನೀರಿಗೆ ಹಾಹಾಕಾರ ಪ್ರಾರಂಭವಾಗಿದೆ. ಸರ್ಕಾರ ಸರಿಯಾದ ಒಂದು ವ್ಯವಸ್ಥೆಯನ್ನು ಮಾಡದೇ ಇದ್ದರೆ ಇದು ಕ್ಷೋಭೆ ಆಗುವಂತಹ ಪ್ರಸಂಗ ಇದೆ. ಆದುದರಿಂದ ಇದರ ಬಗ್ಗೆ ಹೆಚ್ಚಿನ ಚಿಂತನೆ ಮತ್ತು ಚರ್ಚೆಯಾಗಬೇಕಾಗಿದೆ. ಅದಕ್ಕಾಗಿ ದಯವಿಟ್ಟು ಅವಕಾಶ ಮಾಡಿ ಕೊಡಬೇಕು. ಇವತ್ತು ಸಾಯಂಕಾಲದ ಒಳಗಡೆ ತಾವು ಅವಕಾಶ ಕೊಟ್ಟರೂ ಅಡ್ಡಿಯಿಲ್ಲ. ಇವತ್ತು ಕಾರ್ಯಕಲಾಪಗಳನ್ನು ನೋಡಿಕೊಂಡು ಪ್ರಾಮುಖ್ಯವಾಗಿ ಪ್ರಥಮ ಪ್ರಾಶಸ್ತ್ಯದ ಮೇಲೆ ಈ ವಿಷಯವನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ತಮಗೆಲ್ಲಾ ಗೊತ್ತಿರಬಹುದು. ಬಿ.ಎ.ಸಿ ಮೀಟಿಂಗ್‌ನಲ್ಲಿ ಇವತ್ತು ಯಾರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕೆಂದು ಇದ್ದಾರೆ ಅವರು ಮಾತನಾಡಬೇಕೆನ್ನುವುದು ಒಂದು; ಇನ್ನು ಎರಡನೆಯದಾಗಿ ಇವತ್ತು ಮುಖ್ಯ ಮಂತ್ರಿಗಳು ಉತ್ತರ ಕೊಡುವುದು ಹಾಗೂ ನಾಳೆ ದಿವಸ ಕುಡಿಯುವ ನೀರಿನ ವಿಚಾರವಾಗಿ ತೆಗೆದುಕೊಳ್ಳಬಹುದೆಂದು ತೀರ್ಮಾನವಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾವು ತಮಗೆ ಅವಕಾಶ ಕೇಳಿದ್ದು ಶೂನ್ಯ ವೇಳೆಯಲ್ಲಿ ನಾವು ವಿಷಯವನ್ನು ಎತ್ತಿದಾಗ ತಕ್ಷಣ ಹಿಂದೆ ಸರ್ಕಾರ ಪ್ರತಿಕ್ರಿಯಿಸಿದ್ದು ಈಗ ತಕ್ಷಣ ರಿಯಾಕ್ಟ್ ಮಾಡುವುದಿಲ್ಲವೆನ್ನುವ ವಿಚಾರವಿದೆ. ಕೇಂದ್ರ ಸರ್ಕಾರದ ಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದರ ಬಗ್ಗೆ ನಾವು ಅದನ್ನು ಮಾಡಿದ್ದೇವೆನ್ನುವ ವಿಚಾರವನ್ನು ಸಾರ್ವಜನಿಕರಿಗೆ ಹೇಳುವುದಿಲ್ಲ. ಕುಡಿಯುವ ನೀರಿನ ಬಗ್ಗೆ ನಾವು ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಎಂಟು ದಿವಸಗಳಿಂದ ಹೇಳುತ್ತಿದ್ದೇವೆ. ಇಲ್ಲಿ ಇಬ್ಬರು ಮಂತ್ರಿಗಳಿದ್ದಾರೆ. ಮಾನ್ಯ ಘೋರ್ಪಡೆ ಹಾಗೂ ದಿವಾಕರ ಬಾಬುರವರು. ಇವರಲ್ಲಿ ಯಾರಾದರೊಬ್ಬರು ಬಂದು ಒಂದು ಜಿಲ್ಲೆಗೆ ಇಷ್ಟು ದುಡ್ಡು ಬಿಡುಗಡೆ ಮಾಡಿದ್ದೇವೆನ್ನುವಂತಹ ಸಮಂಜಸವಾದ ಉತ್ತರವನ್ನು ಕೊಡುತ್ತಿಲ್ಲ. ಹಿರಿಯರಾದ

ಸಚಿವರು ದಯಮಾಡಿ ಇದರ ಬಗ್ಗೆ ಗಮನ ಕೊಟ್ಟು ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ ಎಂದು ಹೇಳಬೇಕು ಮತ್ತು ಅದು ನಮಗೆ ಗೊತ್ತಾಗಬೇಕು. ಚರ್ಚೆ ಮಾಡಿ ಅನರ್ಥ ಆಗುತ್ತದೆ. ಸರ್ಕಾರ ಸ್ಪೆಸಿಫಿಕ್ ಆಗಿ ಹೇಳಬೇಕು; ಇಂತಹ ತಾಲ್ಲೂಕಿಗೆ ಇಷ್ಟು ಹಣ ಒದಗಿಸಿದ್ದೇವೆ. ಇಂತಹ ಕಾಮಗಾರಿ ಆಗುತ್ತದೆ ಅಥವಾ ಇಲ್ಲ ಎಂದು ಏನಾದರೂ ಒಂದು ಹೇಳಬೇಕು. ಮಾನ್ಯ ಮಂತ್ರಿಗಳು ಕ್ಷಮಿಸಬೇಕು, ಮಾನ್ಯ ರಂಗನಾಥ ಅವರಾಗಲಿ, ಮಾನ್ಯ ತಿಮ್ಮಪ್ಪನವರಾಗಲಿ ಹಾಜರಿರುತ್ತಾರೆ. ಆದರೆ ಸ್ಪೆಸಿಫಿಕ್ ಆನ್ಸರ್ ಸಿಗದೇ ಹೋದರೆ ಏನು ಉಪಯೋಗ ಹೇಳಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ಕಾರ್ಯಕಲಾಪದ ಪಟ್ಟಿಯಲ್ಲಿ ನಿಯಮ 69ರ ಅಡಿಯಲ್ಲಿ ಕುಡಿಯುವ ನೀರಿನ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ ಬಂದಿತ್ತು.

ಅಧ್ಯಕ್ಷರು: ಆಯಿತು, ಇದರ ಬಗ್ಗೆ ನಾನು ಹೇಳುತ್ತೇನೆ, ಇದನ್ನು ನಾಳೆ ತೆಗೆದುಕೊಳ್ಳಬೇಕೆಂದು ಬಿ.ಎ.ಸಿ. ಮೀಟಿಂಗ್‌ನಲ್ಲೂ ತೀರ್ಮಾನವಾಗಿದೆ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾವು ಪ್ರಸ್ತಾಪ ಮಾಡಿದ ಹಾಗೆ ಬಿಎಸಿಯಲ್ಲಿ ತೀರ್ಮಾನವಾದ ಹಾಗೆ ನಾಳೆ ಕುಡಿಯುವ ನೀರಿನ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದರಿಂದ ಸರ್ಕಾರದಿಂದ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆಂಬ ಬಗ್ಗೆ ಸಂಪೂರ್ಣವಾಗಿ ಬೆಳಕನ್ನು ಚೆಲ್ಲುವುದಕ್ಕೆ ಈ ಸದನದಲ್ಲಿ ಪ್ರಯತ್ನ ಮಾಡುತ್ತೇವೆ. ಆದುದರಿಂದ ಆ ವಿಷಯವನ್ನು ನಾಳೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು: ಆಯಿತು, ನಾಳೆ ಈ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮೀಸಲಾತಿಯ ಬಗ್ಗೆ....

ಅಧ್ಯಕ್ಷರು: ಅದನ್ನೂ ಸಹ ಇದರ ಜೊತೆಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮೀಸಲಾತಿಯ ಬಗ್ಗೆಯೂ ಚರ್ಚೆಯಾಗಬೇಕು, ಏಕೆಂದರೆ ಇದರ ಬಗ್ಗೆ ತಮಗೆ ಗೊತ್ತಿರುವ ಹಾಗೆ ನಾನು ತಮ್ಮ ಕಚೇರಿಯಲ್ಲಿ ಭೇಟಿ ಮಾಡಿದಂತಹ ಸಂದರ್ಭದಲ್ಲಿ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಅದೆಲ್ಲವನ್ನು ನಾವು, ಯಾವ ರೀತಿಯಲ್ಲಿ ನಡೆಯುತ್ತಿದೆ, ಏನು ಆಗುತ್ತಿದೆ ಎಂಬುದನ್ನು ಜನಗಳ ಗಮನಕ್ಕೂ ತರಬೇಕಾಗುತ್ತದೆ. ಆದುದರಿಂದ ತಾವು ಸಮಯವನ್ನು ನಿಗದಿ ಮಾಡಿ, ಅದಕ್ಕೆ ನಾವು ಬದ್ಧರಾಗುತ್ತೇವೆ, ತಾವು ನಾಳೆ ಸಮಯವನ್ನು ನಿಗದಿ ಮಾಡಿ.

ಅಧ್ಯಕ್ಷರು: ಆಯಿತು, ನಾಳೆ ಚರ್ಚೆಗೆ ಸಮಯವನ್ನು ನಿಗದಿ ಮಾಡೋಣ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಸದನದಲ್ಲಿ ಹೇಳಿದ್ದಾರೆ, ಶಾಸಕರನ್ನು ಕೇಳಿ ದಿವಸವನ್ನು ನಿಗದಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಡ್ವೈಸ್ ಮಾಡುತ್ತೇವೆಂದು ಹೇಳಿದ್ದರು. ನಮ್ಮನ್ನು ಯಾವ ಜಿಲ್ಲಾಧಿಕಾರಿಗಳು ಕೇಳಲಿಲ್ಲ, ನಾವು ಕೊಟ್ಟಿದ್ದನ್ನು ಕನ್ಸಿಡರ್ ಮಾಡಲಿಲ್ಲ. ಹೋಗಲಿ ಆಡಳಿತ ಪಕ್ಷದವರು ಕೊಟ್ಟಿದ್ದಾದರೂ ಕನ್ಸಿಡರ್ ಮಾಡಿದ್ದಾರೆಯೇ ಎಂದರೆ ಅದನ್ನು ಮಾಡಲಿಲ್ಲ, ಯಾರ್ಯಾರು ಏನೇನು ಮಾಡಬಹುದೋ ಅದೆಲ್ಲವನ್ನು ಮಾಡಿದ್ದಾರೆ. ಅದು ವಿಚಿತ್ರವಾದಂತಹ ರೀತಿಯಲ್ಲಿ ಮಾಡಿದ್ದಾರೆ. ಎಲ್ಲಿ ಮಹಿಳೆಯರು ಹೆಚ್ಚು ಇದ್ದಾರೆ, ಅಲ್ಲಿ ಆದ್ಯತೆಯನ್ನು ಕೊಡಲಿಲ್ಲ, ಷೆಡ್ಯೂಲ್ಡ್ ಕಾಸ್ಟ್ ಇರುವಂಥ ಕಡೆಗಳಲ್ಲೂ ಕೊಡಲಿಲ್ಲ. ಎಲ್ಲಾ ಅವ್ಯವಸ್ಥೆ ಮಾಡಿದ್ದಾರೆ, ಆದುದರಿಂದ ಇದರ ಬಗ್ಗೆ ಚರ್ಚೆಯಾದರೆ ಒಳ್ಳೆಯದೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು: ನಾಳೆ ಕುಡಿಯುವ ನೀರಿನ ವಿಚಾರವಾಗಿ ಚರ್ಚೆಯಾದ ಮೇಲೆ ಈ ಮೀಸಲಾತಿಯ ವಿಚಾರವನ್ನು ತೆಗೆದಕೊಳ್ಳೋಣ. ಇನ್ನು ರಾಜ್ಯಪಾಲರ ಭಾಷಣದ ಬಗ್ಗೆ ಇನ್ನು ಎಷ್ಟು ಜನರು ಮಾತನಾಡುವವರು ಇದ್ದಾರೆ? ಏಕೆಂದರೆ ಪುನಃ ಇದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರೆ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವುದೋ, ಬೇಡವೋ ಎಂಬ ಮುಜುಗರ ಉಂಟಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಈಗ ನಮ್ಮಲ್ಲಿ ಏನು ಒತ್ತಾಯವಿದ ಎಂದರೆ ನಮ್ಮ ಕಡೆಯಿಂದ, ಮತ್ತೆ ವಿರೋಧಪಕ್ಷದ ಕಡೆಯಿಂದ, ಮಾನ್ಯ ಅರಗಜ್ಞಾನೇಂದ್ರರವರು ಮಾತನಾಡುತ್ತಾರೆ, ನಂತರ ಶ್ರೀಎಸ್.ಎಸ್ಃಪಾಟೀಲ್‌ರವರು, ಮಾನ್ಯ ಚಂದ್ರಣ್ಣನವರು, ಹೊಸ ಸದಸ್ಯರು ಎಂದರೆ ಎರಡನೆಯ ಬಾರಿ ಆಯ್ಕೆಯಾಗಿರುವವರು ಮೂರು ಜನರು ಮಾತನಾಡುತ್ತಾರೆ. ತಾವು ಅದಕ್ಕೆ ಸಮಯವನ್ನು ನಿಗದಿ ಮಾಡಿ, ಅದನ್ನು ನಾವು ಪಾಲನೆ ಮಾಡುತ್ತೇವೆ.

ಅಧ್ಯಕ್ಷರು: ನಾವು ಹೊಸ ಸದಸ್ಯರಿಗೂ ಮಾತನಾಡುವುದಕ್ಕೆ ಆಸ್ಪದ ಕೊಡೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದಲ್ಲಿ ಹದಿನೆಂಟು ಜನರು ಇದ್ದೇವೆ, ಅದರಲ್ಲಿ ಹದಿನೇಳು ಜನರು ಎರಡನೆಯ ಬಾರಿ ಮೂರನೆಯ ಬಾರಿ ಚುನಾಯಿತರಾಗಿ ಬಂದಿರುವವರಾಗಿದ್ದೇವೆ. ಇದರಲ್ಲಿ ಒಬ್ಬರು ಹೊಸಬರಿದ್ದಾರೆ, ಅವರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ, ನಮ್ಮ ಪಕ್ಷದಲ್ಲಿ ಆ ಸಮಸ್ಯೆ ಇಲ್ಲ

ಅಧ್ಯಕ್ಷರು: ಹಾಗಾದರೆ ಮಾತನಾಡುವವರು ಎಷ್ಟು ಜನರಿದ್ದಾರೆಂದು

ನೋಡಿಕೊಂಡು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇವತ್ತು ಚರ್ಚೆಗೆ ಉತ್ತರವನ್ನು ಕೊಡುವುದಾ ಬೇಡವಾ ಎಂದು.

ಶ್ರೀ ಡಿ.ವಿ.ಸದಾನಂದ ಗೌಡ: ಮಾನ್ಯ ಅಧ್ಯಕ್ಷರೆ, ತಾವು ಸಮಯವನ್ನು ನಿಗದಿ ಮಾಡಿದರೆ ಏನಾಗುತ್ತದೆಂದರೆ ನಮ್ಮಲ್ಲಿ ಮಾತನಾಡುವವರು ಎಷ್ಟು ಜನ ಇದ್ದರೂ ನಾವು ಆ ಸಮಯವನ್ನು ಅಲಾಟ್ ಮಾಡಿಕೊಂಡು ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ಈಗ ತಾವು ಇವತ್ತು ಬಿಜೆಪಿಗೆ ಇಷ್ಟು ಸಮಯವನ್ನು ಕೊಡುತ್ತೀರೆಂದರೆ ನಮ್ಮಲ್ಲಿ ಇರುವಂತಹ ನಾಲ್ಕೈದು ಜನರು 10-15 ನಿಮಿಷಗಳು ಎಂದು ನಿಗದಿ ಮಾಡಿಕೊಂಡು ಮಾತನಾಡಲು ಸಾಧ್ಯವಾಗುತ್ತದೆ. ಅದರಲ್ಲಿ ಪ್ರಮುಖರಾದಂಥವರು ಸ್ವಲ್ಪ ಜಾಸ್ತಿ ಸಮಯವನ್ನು ತೆಗೆದುಕೊಳ್ಳಬಹುದು, ಇನ್ನು ಬಾಕಿ ಇರುವವರು ನಿಗದಿತ ಸಮಯದಲ್ಲಿ ಮಾತನಾಡುವಂತಹ ವ್ಯವಸ್ಥೆಯನ್ನು ಮಾಡಬಹುದು. ಆದಕಾರಣ ತಾವು ನಮಗೆ ಸಮಯವನ್ನು ನಿಗದಿ ಮಾಡಿ ಹೇಳಿದರೆ ನಮಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ಆಯಿತು ಹೇಳುತ್ತೇವೆ, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

೩) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಗಂಗೊಳ್ಳಿ ಸರ್ವಋತು ಬಂದರಿನ ಕುರಿತು

(271): 2886

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಮಿನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಗೊಳ್ಳಿ ಸರ್ವಋತು ಬಂದರಿಗೆ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಎಂದು ಕಳುಹಿಸಲಾಯಿತು;

ಆ) ಅದಕ್ಕೆ ಕೇಂದ್ರದಿಂದ ಅನುಮೋದನೆ ದೊರಕಿದೆಯೇ?

ಶ್ರೀ ಬಿ.ರಮಾನಾಥ ರೈ (ಮಿನುಗಾರಿಕೆ, ಬಂದರು ಮತ್ತು ಪ್ರದೇಶ ಅಭಿವೃದ್ಧಿ ಸಚಿವರು):

ಅ) ದಿನಾಂಕ 9-3-1999.